**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಯಲಬುರ್ಗಾ</u>**

**<u>ಸಿ.ಸಿ. 313/2016</u>**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮೋಹನ | ಪ್ರಾ ಸಾ : | 06 |
| ತಂದೆ/ಗಂಡನ ಹೆಸರು | : ಕನಕನಗೌಡ | ಚಾ ಸಾ : | 16 |
| ವಯಸ್ಸು | : 36 ವರ್ಷ | | |
| ವೃತ್ತಿ | ಃ ವ್ಯವಸಾಯ | | |
| ವಾಸಸ್ಥಳ | ಃ ಬೇವೂರು | | |

**<u>ಸಾಕ್ಷಿಗೆ ದಿನಾಂಕಃ 23-09-2022 ರಂದು ಪ್ರಮಾಣ ವಚನ ನೀಡಲಾಯಿತು</u>**

**<u>ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ</u>**

ನಾನು 2016 ರಲ್ಲಿ ಹೋಮಗಾರ್ಡ ನಾಗಿ ಬೇವೂರು ಪೋಲೀಸ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೇನು.

ದಿನಾಂಕ 20-01-2016 ರಂದು ನಾನು ಚಾಸಾ-15 ಮತ್ತು ಅಮೀನಸಾಬರವರು ಬೆಳಗಿನ ಜಾವಾ 4 ಗಂಟೆಗೆ ಗಸ್ತು ಕರ್ತವ್ಯಕ್ಕೆ ಹೋಗಿದ್ದೇವು. ಆ ಸಮಯದಲ್ಲಿ ಠಾಣೆಯಿಂದ ಹೆದ್ದಾರಿಯಲ್ಲಿ ಅಪಘಾತ ವಾಗಿರುತ್ತದೆ ಹೋಗಬೇಕು ಎಂದು ಕರೆ ಮಾಡಿದ್ದರು. ಅದರಂತೆ ನಾನು ಮತ್ತು ಅಮೀನಸಾಬ ಹಾಗೂ ಇತರೆ ಮೂರು ಜನರು ಗುನ್ನಾಳ ಹೊಸಪೇಟ ಹೆದ್ದಾರಿಯ ಹತ್ತಿರ ಹೋಗಿರುತ್ತೇವೆ. ಅಲ್ಲಿ ಹೋಗಿ ನೋಡಿದಾಗ ಕುರಿಗಳನ್ನು ತುಂಬಿದ ಬುಲೇರೊ ವಾಹನ ಅಪಘಾತವಾಗಿರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ನಾವು ಮಾತ್ರ ಇದ್ದೇವು. ಸ್ಥಳದಲ್ಲಿ ನಾವು ಬ್ಯಾರಿ ಕೇಡಗಳನ್ನು ಅಳವಡಿಸಿ ರಸ್ತೆ ಕ್ಲಿಯರ ಮಾಡುತ್ತಾ ನಿಂತಿದ್ದೇವು. ಆಗ ಒಂದು ಲಾರಿ ವೇಗವಾಗಿ ಬಂದು ಬುಲೇರೊ ವಾಹನಕ್ಕೆ ಡಿಕ್ಕಿ

ಪಡಿಸಿ ಅದರ ಮುಂದೆ ನಿಂತಿದ್ದ ನಮಗೆ ಅಪಘಾತವಾಗಿರುತ್ತದೆ. ಸದರಿ ಅಪಘಾತದಲ್ಲಿ ನನಗೆ ಒಳಪೆಟ್ಟು ಆಗಿರುತ್ತದೆ ಸ್ಥಳದಲ್ಲಿ ಅಮೀನಸಾಬರವರು ಮೃತಪಟ್ಟಿರುತ್ತಾರೆ. ನಂತರ ನನ್ನನ್ನು ಇಲಕಲ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಬುಲೇರೋ ಹಾಗೂ ಲಾರಿ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ದಿನ ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ಅಪಘಾತವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಇದನ್ನು ಹೊರತುಪಡಿಸಿ ನಾನು ಪೋಲೀಸರಿಗೆ ಯಾವುದೇ ವಿಚಾರ ಹೇಳಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದರು , ನೀಡಲಾಯಿತು)**

**ಪಾಟೀಸವಾಲುಃ ಸ.ಸ.ಅ ರವರಿಂದ**

ದಿನಾಂಕ ೨೧-೦೧-೨೦೧೬ ರಂದು ಬೆ. ೫.೩೦ ಗಂಟೆಗೆ ನಾನು ಚಾಸಾ-೧೫ ರವರು ಗಸ್ತು ಕರ್ತವ್ಯ ಕರ್ತವ್ಯ ಮುಗಿಸಿಕೊಂಡು ಠಾಣೆಗೆ ಬಂದಾಗ ಮೃತ ಅಮೀನಸಾಬ ರವರು ಠಾಣೆಯಲ್ಲಿ ಇದ್ದರು ಎಂದರೆ ಸರಿ. ಆಗ ಚಾಸಾ-೧ ರವರು ಕುಷ್ಟಗಿ ಹೂಸಪೇಟೆಯ ರಾಷ್ಟ್ರೀಯ ಹೆದ್ದಾರಿಯ ಗುನ್ನಾಳ ಸೀಮಾದಲ್ಲಿ ಕುರಿ ತುಂಬಿದ ಬುಲೇರೋ ವಾಹನ ಅಪಘಾತವಾಗಿದ್ದು ಟ್ರಾಫೀಕ ಕ್ಲಿಯರ ಮಾಡಲು ಹೋಗಬೇಕು ಎಂದು ತಿಳಿಸಿದರು ಎಂದರೆ ಸರಿ. ನಂತರ ನಾನು ಹಾಗೂ ಚಾಸಾ-೧೫ , ಮೃತ ಅಮೀನಸಾಬ , ಚಾಸಾ-೧ , ೧೬ ರವರು ಸ್ಥಳಕ್ಕೆ ಹೋಗಿರುತ್ತೇವೆ

ಎಂದರೆ ಸರಿ. ನಾವು ಅಲ್ಲಿಗೆ ಹೋದಾಗ ಜಿ ಎಂ ಆರ ಕಂಪನಿಯ ಕ್ರೇನ್ ಹಾಗೂ ಹೈವೇ ಪೇಟ್ರೊಲಿಂಗ ರವರು , ಅಂಬ್ಯುಲೇನ್ಸ ಹಾಗೂ ಕ್ರೇನ ನೊಂದಿಗೆ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ . ಆಗ ನಮ್ಮ ಜೀಪ ಚಾಲಕ ಚಾಸಾ-೧೪ ರವರು ಜೀಪನ್ನು ಮುಂದಕ್ಕೆ ನಿಲ್ಲಿಸುತ್ತೇನೆ ಎಂದು ಹೇಳಿ ಸೈಡಗೆ ನಿಲ್ಲಿಸಿದರು ಎಂದರೆ ಸರಿ.

ಆಗ ನಾನು ಹಾಗೂ ಜಿ ಎಂ ಆರ ಕಂಪನಿಯ ಸಿಬ್ಬಂದಿಗಳು ಹಾಗೂ ಸಿಬ್ಬಂದಿಗಳೂ ಕೂಡಿಕೊಂಡು ರಸ್ತೆಯ ಸುಗಮ ಸಂಚಾರಕ್ಕಾಗಿ ಸುರಕ್ಷತೆಯ ದೃಷ್ಟಿಯಿಂದ ಬಿದ್ದ ಕುರಿ , ವಾಹನದ ಸುತ್ತಲು ಟ್ರಾಫೀಕ ಕೋನಗಳನ್ನು ಇಟ್ಟು , ನಾವೆಲ್ಲರೂ ಟ್ರಾಫೀಕ ರಿಪ್ಲೇಕ್ಟರಗಳನ್ನು ಹಾಕಿಕೊಂಡು ರಸ್ತೆಯ ಮೇಲೆ ಪಲ್ಟಿಯಾಗಿ ಬಿದಿದ್ದ ಬುಲೇರೋ ವಾಹನವನ್ನು ಕ್ರೇನ ಸಹಾಯದಿಂದ ತಗೆಯುತ್ತಿರುವಾಗ ನಾನು ಚಾಸಾ-೧೫ ರವರು ಕ್ರೇನನ ಎಡಭಾಗದಲ್ಲಿ ಹಾಗೂ ಚಾಸಾ-೧ ಮತ್ತು ೧೭ ರವರು ಬಲಭಾಗದ ಡಿವೈಡರ ಹತ್ತಿರ ನಿಂತಿದ್ದು ಹಾಗೂ ಮೃತ ಅಮೀನಸಾಬರವರು ಕ್ರೇನ ಮುಂಭಾಗದಲ್ಲಿ ನಿಂತಿದ್ದರು ಎಂದರೆ ಸರಿ. ಜಿ ಎಂ ಆರ ಕಂಪನಿಯ ಸಿಬ್ಬಂದಿ ಚಾಸಾ-೧೮ , ೨೦, ೨೧ ರವರು ಅಪಘಾತವಾಗಿ ಬಿದ್ದ ವಾಹನದ ಹತ್ತಿರ ರಸ್ತೆಯ ಡಿವೈಡರ ಮೇಲೆ ಇದ್ದರು ಎಂದರೆ ಸರಿ. ಚಾಸಾ-೨೪ , ೨೬, ೨೭ ರವರು ಬಿದ್ದ ಬುಲೇರೋ ಮುಂದೆ ಮತ್ತು ಎಡಭಾಗದಲ್ಲಿ ನಿಂತುಕೊಂಡು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ವಾಹನವನ್ನು ಕ್ರೇನ ಸಹಾಯದಿಂದ ತಗೆಯುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಲಾರಿ ಚಾಲಕನು ತನ್ನ ಲಾರಿಯನ್ನು ಸಿಗ್ನಲ ಕೋನಗಳನ್ನು

ಲೆಕ್ಕಿಸಿದೆ ಕುಷ್ಟಗಿ ಕಡೆಯಿಂದ ಅತೀ ವೇಗ ಹಾಗೂ ಅಲಕ್ಷತನದಿಂದ ಚಲಾಯಿಸಿ ಪಲ್ಟಿ ಯಾದ ವಾಹನಕ್ಕೆ ಜೋರಾಗಿ ಡಿಕ್ಕಿ ಪಡಿಸಿದರು ಎಂದರೆ ಸರಿ.

ಆಗ ಸುತ್ತಮುತ್ತಲು ನಿಂತಿದ್ದ ನಮಗೆ ಬುಲೇರೋ ವಾಹನ ಬಡಿದು ಗಾಯವಾಗಿರುತ್ತದೆ ಎಂದರೆ ಸರಿ.  ನನಗೆ ಹೊಟ್ಟೆಗೆ ಒಳಪೆಟ್ಟು ಆಗಿತ್ತು ಎಂದರೆ ಸರಿ.  ನನ್ನ ಜೊತೆ ಇದ್ದ ಚಾಸಾ-೧೫ ರವರಿಗೆ ಮೈ ಕೈಗೆ ಒಳಪೆಟ್ಟಾಗಿತ್ತು ಎಂದರೆ ಸರಿ.

ಸದರಿ ಲಾರಿ ಚಾಲಕ ವೇಗವಾಗಿ ಬಂದು ಬುಲೇರೋ ವಾಹನಕ್ಕೆ ಡಿಕ್ಕಿ ಪಡಿಸಿದ್ದರಿಂದ ಬುಲೇರೋ ವಾಹನ ಕ್ರೇನಗೆ ಬಡಿದು ಕ್ರೇನ ಮುಂದೆ ಹೋಯಿತು ಎಂದರೆ ಸರಿ .  ಆಗ ಕ್ರೇನ ಮುಂದೆ ನಿಂತಿದ್ದ ಅಮೀನಸಾಬ ರವರಿಗೆ ಕ್ರೇನ ಬಡಿದು ಅವರು ಕೆಳಗೆ ಬಿದ್ದು ಕ್ರೇನ ಮುಂದಿನ ಗಾಲಿ ಅಮೀನಸಾಬರವರ ಮೇಲೆ ಹತ್ತಿದ್ದರಿಂದ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದರೆ ಸರಿ.

ಕ್ರೇನ ಪಕ್ಕ ನಿಂತಿದ್ದ ಚಾಸಾ-೧ ರವರಿಗೆ ಎಡಗಾಲ ಮೊಣಕಾಲ ಕೆಳಗೆ ಭಾರಿ ರಕ್ತ ಗಾಯವಾಗಿತ್ತು ಎಂದರೆ ಸರಿ. ಚಾಸಾ-೧೭ ರವರಿಗೆ ಕೈಗಳಿಗೆ ಒಳಪೆಟ್ಟು ಆಗಿ ಎರಡು ಕೈಗಳು ಮುರಿದಂತೆ ಆಗಿತ್ತು ಎಂದರೆ ಸರಿ. ಬುಲೇರೋ ವಾಹನದಲ್ಲಿದ್ದ ಮಹಿಬೂಬ ಕೊರ್ಬೋ ಬುಲೇರೋ ವಾಹನದಲ್ಲಿ ಸಿಕ್ಕಿ ಹಾಕಿಕೊಂಡು ತಲೆಗೆ ಮೈಗೆ ಭಾರಿ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿ.  ಚಾಸಾ-೨೭ ರವರಿಗೆ ಭಾರಿ ಗಾಯಗಳಾಗಿತ್ತು. ಚಾಸಾ-೨೨ ರವರಿಗೆ ತಲೆಗೆ ಹಾಗೂ ಇತರ ಭಾಗಗಳಿಗೆ ಭಾರಿ ಗಾಯವಾಗಿತ್ತು. ಚಾಸಾ-೨೪ ರವರಿಗೆ  ಎಡಗಾಲ ಪಾದದ ಹತ್ತಿರ

ರಕ್ತಗಾಯವಾಗಿತ್ತು. ಚಾಸಾ-೨೨ ರವರಿಗೆ ಎಡಗೈ ಹೆಬ್ಬರಳಿನ ಹತ್ತಿರ ಹಾಗೂ ತಲೆಯ ಮುಂಭಾಗಕ್ಕೆ , ಚಾಸಾ-೧೮ ರವರಿಗೆ ಎಡಗಾಲಿ ಭಾರಿ ರಕ್ತಗಾಯವಾಗಿತ್ತು. ಚಾಸಾ-೨೧ ರವರಿಗೆ ಅಲ್ಲಲ್ಲಿ ಸಣ್ಣ ಪುಟ್ಟ ಗಾಯಗಳಾಗಿತ್ತು ಎಂದರೆ ಸರಿ.

ಪೇಟ್ರೋಲಿಂಗ ವಾಹನ ಹಾಗೂ ಅಂಬ್ಯುಲೆನ್ಸ ವಾಹನದ ಚಾಲಕರಾದ ಚಾಸಾ-೧೯ ಹಾಗೂ ೨೩ ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿ. ಚಾಸಾ-೧೪ ರವರು ಸ್ಥಳಕ್ಕೆ ಬಂದು ಅಂಬ್ಯುಲೆನ್ಸಗೆ ಪೋನ ಮಾಡಿದ್ದು ನಂತರ ಅಪಘಾತಪಡಿಸಿದ ಲಾರಿ ಸಂ. ಟಿನ-೫೨/ಎ-೮೮೮೪ ಆಗಿತ್ತು. ಲಾರಿ ಚಾಲಕನ ಹೆಸರು ಅನಬಳಗನ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಂತರ ಬುಲೇರೋ ವಾಹನದ ನಂಬರ ನೋಡಲಾಗಿ ಕೆಎ-೨೮-ಬಿ-೬೩೩೪ ಆಗಿತ್ತು ಎಂದರೆ ಸರಿ. ಸ್ಥಳದಲ್ಲಿದ್ದ ಕ್ರೇನ ನಂ. ಎಪಿ-೧೧/ಡಿ-೯೬೩೩ ಆಗಿತ್ತು ಎಂದರೆ ಸರಿ.

ನಂತರ ಪಿ.ಎಸ ಐ ರವರಿಗೆ ಮಾಹಿತಿ ನೀಡಿ ಅವರು ಸ್ಥಳಕ್ಕೆ ಬಂದು ಚಾಸಾ-೧ ರವರ ಹೇಳಿಕೆ ಪಡೆದು ಗಾಯಗೊಂಡ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ-೧ ರಿಂದ ೫ ಹಾಗೂ ಮು ಮಾ-೧(ಎ) ಮತ್ತು ೧(ಬಿ) ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು ಕಳೆದ ೪ ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದೇನೆ. ನಾನು ಹೋಮಗಾರ್ಡ ಎಂದು ಅಧಿಕೃತನಾಗಿ ನೇಮಕ ಮಾಡಿಲ್ಲ. ತಿಂಗಳಿಗೆ ಇಷ್ಟೆ ಕೆಲಸ ಮಾಡಬೇಕು ಎಂದು ನಿಖರವಾಗಿ ಹೇಳಿರುವುದಿಲ್ಲ ನಮಗೆ ಕೆಲಸಕ್ಕೆ ಸೂಚಿಸಿದ್ದಾಗ ಹೋಗಿರುತ್ತೇವೆ. ನಾನು ಮತ್ತು ಚಾಸಾ-೧೫ ರವರು ಜನವರಿ ತಿಂಗಳಿಲ್ಲಿ ೧ ನೇ ತಾರಿಖಿನಿಂದ ೨೦ ನೇ ತಾರಿಖನವರೆಗೆ ಪೂರ್ತಿ ಕೆಲಸ ಮಾಡಿರುತ್ತೇವೆ.

ಮೇನ್ ಬಜಾರ , ಬ್ಯಾಂಕ ನಾನು ದಿನಾಂಕ ೨೦-೦೧-೨೦೧೬ ರಂದು ಚಾಸಾ-೧೬ ರವರೊಂದಿಗೆ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ. ಬೆಳಿಗ್ಗೆ ೪.೩೦ ಗಂಟೆಗೆ ಚಾಸಾ-೧ ರವರು ನಮ್ಮನ್ನು ಠಾಣೆಗೆ ಕರೆಸಿರುತ್ತಾರೆ. ಠಾಣೆಗೆ ಹೋದಾಗ ಚಾಸಾ-೧ ಹಾಗೂ ೧೭ ರವರು ಇದ್ದರು. ನಾವು ಠಾಣೆ ಬಿಟ್ಟಾಗ ಬೆಳಿಗ್ಗೆ ೪.೩೦ ಗಂಟೆ ಆಗಿತ್ತು. ಠಾಣೆಯಲ್ಲಿ ಅಪಘಾತವಾದ ಸ್ಥಳ ಪೂರ್ವ ದಿಕ್ಕಿಗೆ ಇರುತ್ತದೆ. ಬೇವೂರಿನಿಂದ ಬುಲೇರೊ ಅಪಘಾತಕ್ಕೆ ಇಡಾದ ಸ್ಥಳ ೧೦ ಕಿ.ಮಿ ಅಂತರದಲ್ಲಿದೆ. ಅಪಘಾತ ಸ್ಥಳಕ್ಕೆ ಹೋದಾಗ ಬೆಳಿಗ್ಗೆ ೪.೩೦ ಗಂಟೆ ಸಮಯ ಆಗಿತ್ತು. ಅಪಘಾತ ಸ್ಥಳಕ್ಕೆ ಹೋದಾಗ ೮ ಜನ ಇದ್ದರು. ಬುಲೇರೋ ವಾಹನದಲ್ಲಿಇಬ್ಬರು ಇದ್ದರು ಅವರ ಹೆಸರು ನನಗೆ ಗೊತ್ತಿಲ್ಲ. ಬುಲೆರೋ ವಾಹನದ ಚಾಲಕನ ಹೆಸರು ಗೊತ್ತಿಲ್ಲ.

ಬುಲೇರೋ ವಾಹನ ಬಿದ್ದು ಎಷ್ಟು ಹೊತ್ತಾಗಿತ್ತು ಎಂದು ನನಗೆ ಗೊತ್ತಿಲ್ಲ. ಬುಲೇರೋ ವಾಹನದಲ್ಲಿ ಇಬ್ಬರು ಇದ್ದರು. ಸ್ಥಳದಲ್ಲಿ ಜಿ ಎಂ ಆರ ಕಂಪನಿಯ ೩-೪ ಸಿಬ್ಬಂದಿಗಳು ಇದ್ದರು. ಅವರ ಹೆಸರು ಹಾಗೂ ಹುದ್ದೆ ನನಗೆ ಗೊತ್ತಿಲ್ಲ. ಕ್ರೇನ

ಚಾಲಕನ ಹೆಸರು ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದ ೧೫ ನಿಮಿಷಗಳ ನಂತರ ಹೈವೇ ಅಂಬ್ಯುಲೇನ್ಸ ಬಂದಿರುತ್ತದೆ. ನನಗೆ ಹೈವೆ ಅಂಬ್ಯುಲೇನ್ಸ ಚಾಲಕನ ಹೆಸರು ಗೊತ್ತಿಲ್ಲ. ಅದರಲ್ಲಿ ಎಷ್ಟು ಜನರು ಇದ್ದರು ಗೊತ್ತಿಲ್ಲ.

ಬುಲೇರೋ ವಾಹನವು ಪೂರ್ವ ದಿಕ್ಕಿಗೆ ಮುಖ ಮಾಡಿ ಬಿದ್ದಿತ್ತು. ಬುಲೇರೊ ವಾಹನದಲ್ಲಿ ಎಷ್ಟು ಕುರಿಗಳು ಇದ್ದು ಹಾಗೂ ಎಷ್ಟು ಕುರಿಗಳು ಸತ್ತುಬಿದ್ದಿದ್ದವು ಗೊತ್ತಿಲ್ಲ. ಸ್ವಲ್ಪ ಕುರಿಗಳು ಕೆಳಗೆ ಬಿದಿದ್ದವು. ನಾವು ಸ್ಥಳಕ್ಕೆ ಹೋಗಿ ಬೆಳಿಗ್ಗೆ ೪.೩೦ ಗಂಟೆಗೆ ಕ್ರೇನ ಸಹಾಯದಿಂದ ಕೆಲಸ ಮಾಡುತ್ತಿದ್ದೇವು. ಬುಲೆರೋ ವಾಹನವನ್ನು ಮೇಲಕ್ಕೆ ಕ್ರೇನ ಸಹಾಯದಿಂದ ಎತ್ತುತ್ತಿದ್ದರು ಎಂದರೆ ಸರಿ. ಸದರಿ ಕ್ರೇನ ಯಾವ ಕಡೆಗೆ ಮುಖ ಮಾಡಿ ನಿಂತಿತ್ತು ಎಂದು ಗೊತ್ತಿಲ್ಲ. ಬುಲೇರೋ ವಾಹನಪೂರ್ವದ ಕಡೆ ಇರುವ ರಸ್ತೆಯ ಮೇಲೆ ಬಿದ್ದಿತ್ತು . ಸದರಿ ರಸ್ತೆ ಎಷ್ಟು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಬುಲೇರೋ ವಾಹನ ರಸ್ತೆಯ ಮದ್ಯ ಭಾಗದಲ್ಲಿ ಬಿದ್ದಿತ್ತು. ಬುಲೇರೋ ವಾಹನದ ಚಾಲಕ ಹೊರಗೆ ಇದ್ದರು. ಸದರಿ ರಾಷ್ಟ್ರೀಯ ಹೆದ್ದಾರಿಯ ಎರಡು ರಸ್ತೆಯ ನಡುವೆ ಡಿವೈಡರ ಇದೆ ಎಂದರೆ ಸರಿ. ಸದರಿ ಡಿವೈಡರ ಎಷ್ಟು ಅಗಲ ಇದೆ ಗೊತ್ತಿಲ್ಲ. ಯಾವುದೋ ಒಂದು ಹಳ್ಳಿ ಬಂದರೆ ಅವು ಎರಡು ವಿಭಜಕವನ್ನು ಕೂಡಿಸಿರುತ್ತಾರೆ ಎಂದರೆ ಸರಿ.

ಕುಷ್ಟಗಿ ರಸ್ತೆಯ ಕಡೆಗೆ ೪ ಕಿ.ಮಿ ಅಂತರದಲ್ಲಿ ವಿಭಜಕ ಇತ್ತು. ಮು ಮಾ-೨(ಎ) ಮತ್ತು (ಬಿ) ಯನ್ನು ಹೊಸಪೇಟೆ ಕಡೆಗೆ ೧೦೦ ಮಿಟರ ದೂರದಲ್ಲಿ ಇಟ್ಟಿದ್ದರು

ಮು ಮಾ ೧(ಎ) ಮತ್ತು(ಬಿ) ಯನ್ನು ಬುಲೇರೋ ವಾಹನದ ಎಷ್ಟು ಅಡಿ ದೂರದಲ್ಲಿ ಇಟ್ಟಿದ್ದರು ನನಗೆ ಗೊತ್ತಿಲ್ಲ. ಮು ಮಾ ೧ ಎ ಬಿ ಮತ್ತು ೨ ಎ ಬಿ ನ್ನು ಜಿ ಎಂ ಆರ ಕಂಪನಿಯ ಸಿಬ್ಬಂದಿಗಳು ತಗೆದುಕೊಂಡು ಬಂದಿರುತ್ತಾರೆ. ಎಷ್ಟು ಹೊತ್ತಿಗೆ ತಗೆದುಕೊಂಡು ಬಂದಿರುತ್ತಾರೆ ನನಗೆ ಗೊತ್ತಿಲ್ಲ. ಮು ಮಾ ೧(ಎ) ಮತ್ತು(ಬಿ) ಹಾಗೂ ಮು ಮಾ ೨(ಎ) ಮತ್ತು(ಬಿ) ಗಳನ್ನು ಇಟ್ಟ ಜಾಗದಲ್ಲಿ ಯಾವುದೇ ಸಿಬ್ಬಂದಿಗಳು ಇರಲಿಲ್ಲ. ಕುಷ್ಟಗಿ ಕಡೆಯಿಂದ ಬರುವ ರಸ್ತೆಯಲ್ಲಿ ಟ್ರಾಪೀಕ ಸಿಗ್ನಲ ಹಾಗೂ ಪೋಲಿಸರು ಇರಲಿಲ್ಲ ಎಂದರೆ ಸರಿ.

ಹೊಸಪೇಟೆ ಕಡೆಯಿಂದ ಬರುವ ವಾಹನಗಳು ಎಡ ರಸ್ತೆ ಹಾಗೂ ಕುಷ್ಟಗಿ ಕಡೆಯಿಂದ ಬರುವ ವಾಹನಗಳು ಬಲರೆಸ್ತಯಲ್ಲಿ ಚಲಿಸುತ್ತಿದ್ದವು ಎಂದರೆ ಸರಿ. ಕುಷ್ಟಗಿ ಕಡೆಯಿಂದ ಬರುವ ರಸ್ತೆ ಪೂರ್ವಕ್ಕೆ ಹಾಗೂ ಹೊಸಪೇಟೆ ಕಡೆಯಿಂದ ಬರುವ ರಸ್ತೆ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ. ಸದರಿ ಹೆದ್ದಾರಿಯಲ್ಲಿ ಸಾಕಷ್ಟು ವಾಹನಗಳು ಚಲಿಸುತ್ತಿದ್ದವು ಎಂದರೆ ಸರಿ. ಕುಷ್ಟಗಿ ಕಡೆಯಿಂದ ಬರುತ್ತಿದ್ದ ವಾಹನಗಳು ಪೂರ್ವ ದಿಕ್ಕಿನ ಕಡೆಯಿಂದ ಬುರತ್ತಿದ್ದವು. ಬಿದ್ದ ಬುಲೇರೋ ವಾಹನದ ಪೂರ್ವ ದಿಕ್ಕಿನಿಂದ ವಾಹನಗಳು ಚಲಾಯಿಸುತ್ತಿದ್ದವು. ಯವುದೇ ಒಂದು ವಾಹನ ರಸ್ತೆಯಲ್ಲಿ ಅಪಘಾತವಾದಾಗ ರಸ್ತೆಯ ಮೇಲೆ ಸುರಕ್ಷಿತ ಕ್ರಮಗಳನ್ನು ಅಳವಡಿಸಿದಾಗ ವಾಹನಗಳನ್ನು ಬೆರೊಂದು ರಸ್ತೆಯ ಮೂಲಕ ಕಳುಹಿಸುತ್ತಾರೆ ಎಂದರೆ ಸರಿ. ಸದರಿ ದಿನ ಒಟ್ಟು ಎಷ್ಟು ಲಾರಿಗಳು ಹೋದವು ಎಂದು ನನಗೆ ಗೊತ್ತಿಲ್ಲ.

ಸದರಿ ದಿನ ಅಪಘಾತಪಡಿಸಿದೆ ಎನ್ನಲಾದ ಲಾರಿ ಎಷ್ಟು ಗಂಟೆಗೆ ಬಂದಿರುತ್ತದೆ ಎಂದು ಗೊತ್ತಿಲ್ಲ. ನಾನು ಬುಲೆರೋ ವಾಹನದ ಪೂರ್ವ ದಿಕ್ಕಿಗೆ ನಿಂತಿದ್ದೇನು. ಡಿವೈಡರ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ. ಕ್ರೇನ ಪಕ್ಕದಲ್ಲಿ ಯಾರು ನಿಂತಿದ್ದರು ಎಂದು ಗೊತ್ತಿಲ್ಲ. ಮೃತ ಅಮೀನಸಾಬ ರವರು ಎಲ್ಲಿ ನಿಂತಿದ್ದರು ಎಂದು ಗೊತ್ತಿಲ್ಲ. ಚಾಸಾ-೧೫ , ೧೭ ರಿಂದ ೨೭ ರವರು ಎಲ್ಲಿ ನಿಂತಿದ್ದರು ಎಂದು ಗೊತ್ತಿಲ್ಲ. ನಾನು ಕ್ರೇನನ ದಕ್ಷಿಣ ಭಾಗಕ್ಕೆ ನಿಂತಿದ್ದೇನು ಎಂದರೆ ಸರಿ. ಸದರಿ ಲಾರಿ ಎಲ್ಲಿಂದ ಹಾಗೂ ಎಷ್ಟು ದೂರದಿಂದ ಬಂದಿರುತ್ತದೆ ಎಂದು ನಾನು ನೋಡಿಲ್ಲ ಎಂದರೆ ಸರಿ. ಬುಲೇರೋವನ್ನು ಕ್ರೇನ ಎತ್ತುವ ಸಮಯದಲ್ಲಿ ಕ್ರೇನನ ಗಾಲಿ ಮೃತ ಅಮೀನಸಾಬರವರಿಗೆ ಹರಿದು ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಕ್ರೇನ ಸಹಾಯದಿಂದ ಬುಲೇರೋವನ್ನು ಎತ್ತುವಾಗ ಚಾಸಾ-೧, ೧೫ ರಿಂದ ೨೨ , ೨೪, ೨೬ , ೨೭ ರವರಿಗೆ ಗಾಯಗಳಾಗಿರುತ್ತವೆ ಎಂದರೆ ಸರಿ. ಕುಷ್ಟಗಿ ಕಡೆಯಿಂದ ಸದರಿ ಲಾರಿ ಎಷ್ಟು ವೇಗದಲ್ಲಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಲಾರಿ ಹಾಗೂ ಬುಲೆರೋ ವಾಹನ ಸಂಖ್ಯೆ ಗೊತ್ತಿಲ್ಲ. ನಾನು ನನ್ನ ಹೇಳಿಕೆಯಲ್ಲಿ ಲಾರಿ ಹಾಗೂ ಬುಲೆರೋ ವಾಹನ ಸಂಖ್ಯೆ ಹೇಳಿಲ್ಲ ಎಂದರೆ ಸರಿ. ನಾನು ಚಾಸಾ-೧, ೧೫, ೧೭ ರವರಿಗೆ ಗಾಯಗಳಾಗಿರುತ್ತವೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೇನೆ. ಬುಲೆರೋ ವಾಹನವನ್ನು ಮೇಲಕ್ಕೆ ಎತ್ತುವಾಗ ಕ್ರೇನ ಚಾಲಕನ ತಪ್ಪಿನಿಂದ ಅಪಘಾತವಾಗಿದ್ದು

ಅಮೀನುಸಾಬರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ದಿನ ಕ್ರೇನ ಚಾಲಕನ ತಪ್ಪಿನಿಂದನನಗೆ ಚಾಸಾ-೧ , ೧೫ , ೧೭ ರಿಂದ ೨೨, ೨೪,೨೬,೨೭ ರವರಿಗೆ ಗಾಯಗಳಾಗಿರುತ್ತವೆ ಎಂದರೆ ಸರಿ.

ಪೋಲಿಸರು ೨೨ ತಾರೀಖನಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯಗಳಾಗಿಲ್ಲ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಸ್ಥಳದಲ್ಲಿ ಒಟ್ಟು ೩ ಟ್ರಾಪೀಕ ರಿಫ್ಲೇಕ್ಟರಗಳು ಇದ್ದವು ಅವುಗಳನ್ನುಯಾರು ಧರಿಸಿದ್ದರು ಗೊತ್ತಿಲ್ಲ. ಸ್ಥಳದಲ್ಲಿ ಮು ಮಾ-೧ ಮತ್ತು ೨ ನ್ನು ಇಟ್ಟಿರಲಿಲ್ಲ ಮು ಮಾ-೧ ಮತ್ತು ೨ ಕ್ಕೆ ಲಾರಿ ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ. ಮು ಮಾ ೧(ಎ) ಮತ್ತು(ಬಿ) ಹಾಗೂ ಮು ಮಾ ೨(ಎ) ಮತ್ತು(ಬಿ) ಗಳ ಮೇಲೆ ಒಡೆದ ಗುರುತುಗಳು ಇಲ್ಲ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಯಲಬುರ್ಗಾ